# 1. ಸರ್ಕಾರಿ ಪ್ರೌಢಶಾಲೆ ಯಡೂರು, ಹೊಸನಗರ

ಸುಂದರ ಮಲೆನಾಡಿನ ರಮ್ಯ ತಾಣದಲ್ಲಿರುವ ನಮ್ಮ ಸರ್ಕಾರಿ ಪ್ರೌಢಶಾಲೆ, ಯಡೂರು 13/07/1963 ನೇ ಇಸವಿಯಲ್ಲಿ ಪ್ರಾರಂಭಗೊಂಡಿದ್ದು ಅವಶ್ಯ ಮೂಲಭೂತ ಸೌಕರ್ಯಗಳೊಂದಿಗೆ ಶಿಕ್ಷಕರ, ಎಸ್‌ಡಿಎಂಸಿ ಸದಸ್ಯರ, ಪೋಷಕರ ಹಾಗೂ ಹಿರಿಯ ವಿದ್ಯಾರ್ಥಿಗಳ ಸಂಘದ ಪ್ರಯತ್ನದಿಂದ ಶಾಲೆಯು ಸರ್ವತೋಮುಖ ಅಭಿವೃದ್ಧಿ ಹೊಂದಿ ತಾಲೂಕಿನಲ್ಲಿ, ಜಿಲ್ಲೆಯಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ಉತ್ತಮ ಹೆಸರಿನೊಂದಿಗೆ ಸಾಕಷ್ಟು ಹೆಸರಿನೊಂದಿಗೆ ಪ್ರಶಸ್ತಿಗಳನ್ನೂ ಪಡೆದಿದೆ.

## ಶಾಲೆಯಲ್ಲಿ ಕೈಗೊಂಡ ನಾವಿನ್ಯಯುತ ಚಟುವಟಿಕೆಗಳು:-

- ಸುಂದರವಾದಹೂ ತೋಟ ನಿರ್ಮಾಣ
- ಸುಸಜ್ಜಿತ ಕಂಪ್ಯೂಟರ್ ಕೊಠಡಿ
- ವಿದ್ಯಾರ್ಥಿಗಳ ಕಲಿಕೆಯಲ್ಲಿ ಪ್ರೊಜೆಕ್ಟರ್ ಬಳಕೆ
- ಮಕ್ಕಳಿಂದ ಶಾಲಾ ಸಾಂಸ್ಕೃತಿಕ ಕಾರ್ಯಕ್ರಮಗಳ ನಿರ್ವಹಣೆ
- ಪ್ರಯೋಗ ಶಾಲೆ(ವಾರದ ಪ್ರಯೋಗ ಕಾರ್ಯಕ್ರಮದ ಅನುಷ್ಠಾನ)
- ಪ್ರಾರ್ಥನಾ ವೇಳೆಯಲ್ಲಿ ದಿನಕ್ಕೊಂದು ರಸಪ್ರಶ್ನೆ, ದಿನಪತ್ರಿಕೆ ವಾಚನ
- ಶಾಲಾ ಆವರಣ, ಕೊಠಡಿಗಳು, ಶೌಚಾಲಯಗಳ ಸ್ವಚ್ಛತೆ,
- ಉಚಿತ ತಟ್ಟೆ, ಲೋಟ ಮತ್ತು ಸ್ಟ್ಯಾಂಡ್ ವ್ಯವಸ್ಥೆ
- ಉಚಿತ ಚಾರ್ಜಬಲ್ ಸೋಲಾರ್ ಲ್ಯಾಂಪ್ ವಿತರಣೆ
- ಸ್ವಂತ ಕೊಳವೆ ಬಾವಿ ಮತ್ತು ಉದ್ಯಾನವನಕ್ಕೆ ತುಂತುರು ನೀರಾವರಿ ವ್ಯವಸ್ಥೆ
- ಬೈಸಿಕಲ್ ಸ್ಟ್ಯಾಂಡ್, ಗ್ರಂಥಾಲಯ, ಪ್ರಯೋಗಾಲಯ ವ್ಯವಸ್ಥೆ

## ಆರಂಭದಲ್ಲಿ ಎದುರಿಸಿದ ಸಮಸ್ಯೆಗಳು:-

- ಉತ್ತಮ ಕೊಠಡಿಗಳ ವ್ಯವಸ್ಥೆ ಇದ್ದು, ಬೆಳಕಿನ ಸಮಸ್ಯೆ ಇತ್ತು
- ವಿದ್ಯಾರ್ಥಿಗಳ ಸಂಖ್ಯೆಗಳಿಗನುಗುಣವಾಗಿ ಶೌಚಾಲಯವಿರಲಿಲ್ಲ
- ಶಾಲೆಗೆಕಾಂಪೌಂಡ್ ಇಲ್ಲದಿದ್ದುದು
- ನೀರಿನ ಪೈಪ್ ಲೈನ್ ವ್ಯವಸ್ಥೆ ಅಸಮರ್ಪಕವಾಗಿದ್ದಿತು
- ಪ್ರೊಜೆಕ್ಟರ್ ದುರಸ್ಥಿಯಲ್ಲಿದ್ದಿತು




## ಪರಿಹಾರಕ್ಕೆ ಕೈಗೊಂಡ ಕ್ರಮ:-

ಸ್ಥಳೀಯ ಗ್ರಾಮ ಪಂಚಾಯತ್, ಎಸ್‌ಡಿಎಂಸಿ, ಪೋಷಕರು, ಹಳೆವಿದ್ಯಾರ್ಥಿಗಳು ಮತ್ತು ಶಿಕ್ಷಣಾಸಕ್ತರ ಸಹಾಯದಿಂದ ಅನುದಾನ ಭರಿಸಿ, ಸುಂದರ ಹೂದೋಟ ನಿರ್ಮಾಣ, ಕೊಠಡಿಗಳಿಗೆ ಬೆಳಕಿನ ವ್ಯವಸ್ಥೆ ಮಾಡಲು ಹೆಚ್ಚುವರಿಯಾಗಿ ಗಾಜಿನ ಹಂಚುಗಳನ್ನು ಹಾಕಿಸಲಾಯಿತು. ಪ್ರೊಜೆಕ್ಟರ್ ದುರಸ್ಥಿ ಪಡಿಸಲಾಯಿತು, ಉತ್ತಮ ಪೈಪ್ ಲೈನ್ ವ್ಯವಸ್ಥೆ ಮಾಡಲಾಯಿತು.

ಮುಂದುವರೆದು 2018–19 ನೇ ಸಾಲಿನಲ್ಲಿ ಮಕ್ಕಳ ಕಲಿಕೆಗೆ ಅನುಕೂಲವಾಗಲು ಕಂಪ್ಯೂಟರ್ ಖರೀದಿಸಬೇಕೆಂದು ಯೋಜಿಸಲಾಗಿದೆ. ಔಷದೀಯ ವನ ನಿರ್ಮಾಣಕ್ಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇಲಾಖೆಯಿಂದ ಕೊಠಡಿಗಳ ನಿರ್ಮಾಣಕ್ಕೆ ಬೇಡಿಕೆ ಸಲ್ಲಿಸಿದೆ. ಮೇಲ್ಛಾವಣಿಯ ರಿಪೇರಿಗೆ ವಿವಿಧ ಮೂಲಗಳಿಂದ ಅನುದಾನ ಭರಿಸಲು ಯೋಜಿಸಲಾಗಿದೆ.


















# ಯಡೂರು ಶಾಲೆಗೆ ನೂರರ ಸಂಭ್ರಮ

ವಿಜಯವಾಣಿ ಸುದ್ದಿಜಾಲ ಹೊಸನಗರ

ಶಿಕ್ಷಕರ ಕೊರತೆ, ಮಕ್ಕಳ ಸಂಖ್ಯೆ ಇಲ್ಲ, ಮೂಲಭೂತ ಸೌಕರ್ಯ ಇಲ್ಲ ಎಂಬಿತ್ಯಾದಿ ಕೊರತೆಗಳನ್ನು ಮೆಟ್ಟಿನಿಂತಿರುವ ತಾಲೂಕಿನ ಯಡೂರು ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ 100 ವಸಂತಗಳನ್ನು ಪೂರೈಸಿದ್ದು ಶತಮಾನೋತ್ಸವ ಸಂಭ್ರಮದಲ್ಲಿದೆ.

ಈ ಶಾಲೆ ಆರಂಭವಾಗಿದ್ದು 1915ರಲ್ಲಿ. ಶಾಲೆ ಸಾಗಿ ಬಂದ ಹಾದಿ ಸುಗಮವಾಗಿರದೆ ಕಲ್ಲು ಮುಳ್ಳಿನ ದಾರಿ ಆಗಿತ್ತು. ಮೊದಲು ಗ್ರಾಮದ ಹಿರಿಯ ಶ್ರೀನಿವಾಸ ಜೋಯ್ಸ್ ಅವರ ಮನೆಯಲ್ಲಿ ಶಾಲೆ ತೆರೆಯಲಾಗಿತ್ತು. ಆಗ ಇದನ್ನು ಐಗಳ ಮನೆ ಶಾಲೆ ಎನ್ನಲಾಗುತ್ತಿತ್ತು. ನಂತರ ಬಿದಿರು, ಬೊಂಬುಗಳನ್ನು ಬಳಸಿ ಬೇರೆಡೆ ಹುಲ್ಲು ಹಾಸಿನ ಶಾಲೆಯಾಯಿತು.

ನಂತರದ ದಿನಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಾಗಿ ಗ್ರಾಮದ ಪ್ರಮುಖರ ಮನೆಗಳಲ್ಲೂ ಪಾಠದ ಕೊಠಡಿಗಳಾದವು. ಅಂದಿನ ಗ್ರಾಮದ ಚೇರ್ಮನ್ ಎಚ್.ಎಂ.ರಾಮಪ್ಪಗೌಡ ಅವರ ಪರಿಶ್ರಮದಿಂದ ಬ್ರಿಟಿಷರ ಕಾಲದ ಪೊಲೀಸ್ ಠಾಣೆಯ ಕಟ್ಟಡ ಶಾಲೆಯಾಗಿ ಮಾರ್ಪಾಡಾಯಿತು. ಅಲ್ಲಿ ಎಸ್‌ಟಿಎಂಎಸ್ (ಸಣ್ಣ ಮಾದರಿ ಪ್ರಾಥಮಿಕ ಶಾಲೆ) ಆರಂಭಿಸಲಾಯಿತು. ಅಂತಿಮವಾಗಿ 1955-56ರಲ್ಲಿ ನೂತನ ಕಟ್ಟಡ ನಿರ್ಮಾಣಕ್ಕೆ ಗ್ರಾಮಸ್ಥರು ಅಣಿಯಾದರು. ಈಗ 150ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಯಡೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ.

ನೂರು ವಸಂತಗಳ ಸಂಭ್ರಮಾಚರಣೆಯ ಹಿಂದೆ ಹಲವರ ಕೊಡುಗೆ, ಶ್ರಮವಿದೆ. ಎದುರಾದ ಹತ್ತಾರು ಸಮಸ್ಯೆಗಳ ನಿವಾರಣೆಯಲ್ಲಿ ಗ್ರಾಮಸ್ಥರ ಸಹಭಾಗಿತ್ವ ಮಾದರಿಯಾಗಿದೆ. ಊರಿನ ಗಣ್ಯರ, ಪಾಲಕರ ಆಸಕ್ತಿಯಿಂದ ಶಾಲೆ ಇಂದು ಈ ಹಂತಕ್ಕೆ ಬೆಳೆದಿದೆ.

| ಎಚ್.ಜಿ.ಶಂಕರಪ್ಪಗೌಡ
ಉತ್ಸವ ಆಚರಣಾ ಸಮಿತಿ ಅಧ್ಯಕ್ಷ

## ಇಂದು, ನಾಳೆ ಕಾರ್ಯಕ್ರಮ

**ಶತಮಾನೋತ್ಸವ** ಸಮಾರಂಭವನ್ನು ಜ. 28ರಂದು ಹಮ್ಮಿಕೊಳ್ಳಲಾಗಿದೆ. ವಿಶೇಷ ಉಪನ್ಯಾಸ, ಸಾಧಕರಿಗೆ ಸನ್ಮಾನ, ಶತಮಾನದ ಸವಿನೆನಪು ಸ್ಮರಣಿಕೆ ಬಿಡುಗಡೆ ಕಾರ್ಯಕ್ರಮಗಳು ನಡೆಯಲಿವೆ. ರಸಸಂಜೆ ಕಾರ್ಯಕ್ರಮ, ಪ್ರಾಚ್ಯವಸ್ತು ಪ್ರದರ್ಶನಗಳನ್ನು ಏರ್ಪಡಿಸಲಾಗಿದೆ. ಜ. 29ರಂದು ವಿಶೇಷ ಉಪನ್ಯಾಸ, ಹಳೆಯ ವಿದ್ಯಾರ್ಥಿಗಳಿಂದ ಅನಿಸಿಕೆ ಹಾಗೂ ಸಮಾರೋಪ ಕಾರ್ಯಕ್ರಮಗಳು ಜರುಗಲಿವೆ.









